# ಗುಬ್ಬಿಯ ಅಳಲು

ನಾಮದೇವ ಕಾಗದಗಾರ
ಕಲೆ: ಸಂತೋಷ್ ಸಸಿಹಿತ್ಲು

ಗುಬ್ಬಿ ಗುಬ್ಬಿ
ಎಲ್ಯಾಡಿ ಬಂದೆ....

ಗಿಡ ಮರ ಕೊಳ್ಳ
ಹುಡಿಕ್ಯಾಡಿ ಬಂದೆ
ಕಾಳನು ಹೆಕ್ಕುತಾ
ಚರಂಡಿ ನೀರು ಹೀರುತಾ
ಕಟ್ಟಡದಿಂದ
ಜಿಗಿಯುತ ಬಂದೆ

ಕೊಕ್ಕಲಿ ಕಾಳನು
ಸಿಕ್ಕಿಸಿಕೊಂಡು
ಮರಿಗಳ ಬಾಯಿಗೆ
ಗುಕ್ಕನು ಇಡಲು
ಓಡೋಡಿ ಬಂದೆ

ಗುಬ್ಬಿ ಗುಬ್ಬಿ
ಇಲ್ಯಾಕೆ ಬಂದೆ....

ಪರಿಸರ ಮಾಲಿನ್ಯಕ್ಕೆ
ಸಿಕ್ಕಿ ಒದ್ದಾಡುವ
ನನ್ನವರ ನೋಡಿ
ಅಳುತಾ ಬಂದೆ

ಗಿಡ ಮರ ಕಡಿಯುವ
ಕ್ರೂರಿ ಮನುಜನ ಕಂಡು
ಗಿಡ ಮರ ಬೆಳಸಿ
ಪರಿಸರ ಉಳಿಸಿ
ಎಂದು ಹೇಳಲು
ನೆನಪಾಗಿ ಬಂದೆ

ಗುಬ್ಬಿ ಗುಬ್ಬಿ
ಮತ್ಯಾಕೆ ಬಂದೆ....

ಹೇ ಮನುಜಾ
ನಮ್ಮ ಉಳಿವು
ನಿಮ್ಮ ಉಳಿವು
ಎಂದು ಹೇಳಲು
ನೆನಪಾಗಿ ಬಂದೆ

ಇರುವುದೊಂದೇ
ಭೂಮಿ
ಜೀವ ಸಂಕುಲ
ಉಳಿಸಿ ಎಂದು
ಎಚ್ಚರಿಕೆ ನೀಡಲು ಬಂದೆ




## ಕುಂಚ ಪ್ರಪಂಚ




**ಪ್ರಜ್ಞಾ ವಿ.**
5ನೇ ತರಗತಿ,
ಡೆಲ್ಲಿ ಪಬ್ಲಿಕ್ ಸ್ಕೂಲ್,
ಬೆಂಗಳೂರು





**ಹೃದ್ಯಾ**
2ನೇ ತರಗತಿ, ಬಿಜಿಎಸ್
ಸ್ಕೂಲ್ ಬೆಂಗಳೂರು







**ಸುಮಿತ್**
2ನೇ ತರಗತಿ,
ಸರ್ಕಾರಿ ಮಾದರಿ
ಪ್ರಾಥಮಿಕ ಶಾಲೆ
ಆಂದೋಲಾ,
ಜೇವರ್ಗಿ